**ಚಾಸಾ- 9 ಪ್ರಾಸಾ-2**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ.20149/2017**

| | |
|---|---|
| **ಸಾಕ್ಷಿದಾರರ ಹೆಸರು** | ಜಿ. ರವಿ, |
| **ತಂದೆಯ ಹೆಸರು** | ಗೋವಿಂದ ರಾಜು. |
| **ವಯಸ್ಸು** | 62 ವರ್ಷ. |
| **ಉದ್ಯೋಗ** | ವ್ಯವಹಾರ, |
| **ವಾಸ** | ಶಿವಾಜಿನಗರ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 16.12.2025. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಈ ಪ್ರಕರಣದ ಆರೋಪಿ ನನಗೆ ಗೊತ್ತು. ಅದೇ ರೀತಿ ಚಾಸಾ-1 ರಿಂದ 8 ರವರು ಸಹ ಗೊತ್ತಿಲ್ಲ. ಈ ಪ್ರಕರಣದಲ್ಲಿ ನನಗೆ ಏನು ಗೊತ್ತಿಲ್ಲ. ಈ ಸಂಬಂದ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ತನ್ನ ಹೇಳಿಕೆಯನ್ನು ಅಲ್ಲಗೆಳೆದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ.7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

ನಾನು ಮತ್ತು ನನ್ನ ಹೆಂಡತಿ ಶ್ರೀಮತಿ. ಉಮಾರವರು ಸೇರಿ ಆರೋಪಿಗೆ ಸಂಬಂದಪಟ್ಟ ಟ್ರಾ ಸೀಸನ್ ಎಂಬ ಕಂಪನಿಯ ಹಾಲಿಡೆ ಪ್ಯಾಕೇಜ್ ಜಾಹೀರಾತನ್ನುನೋಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ಸದರಿ ಜಾಹೀರಾತಿನಲ್ಲಿ ಸಾರ್ವಜನಿಕರಿಗೆ ಭಾರತಂದತ್ಯ ಇರುವ ಯಾತ್ರಿಕ ಸ್ಥಳ, ಪ್ರೇಕ್ಷಣಿಯ ಮತ್ತು ಧಾರ್ಮಿಕ ಸ್ಥಳಗಳಿಗೆ ಹೋಗುವವರಿಗೆ ಅಲ್ಲಿ ಸ್ಥಳ, ಹೋಟೆಲ್ ಮತ್ತು ವಸತಿ ಕಲ್ಪಿಸಿಕೊಡುವುದಾಗಿ ಸಾರ್ವಜನಿಕರ ಇಚ್ಚೆಗೆ ಅನುಸಾರವಾಗಿ ಕಂಪನಿಗೆ ಸದಸ್ಯವನ್ನು ಅವರೊಂದಿಗೆ ಕರಾರು ಒಪ್ಪಂದಗಳನ್ನು ಮಾಡಿಕೊಡುವುದಾಗಿ ಒಪ್ಪಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿಯು ತಮ್ಮ ಕಂಪನಿಯಲ್ಲಿ ಸದಸ್ಯತ್ವ ಪಡೆದುಕೊಳ್ಳಲು ರೂ.6,000

**ಚಾಸಾ- 9 ಪ್ರಾಸಾ-2**

ಗಳಿಂದ ರೂ.35,000/-ವರೆಗೆ ಶುಲ್ಕ ವಿಧಿಸುವುದಾಗಿ ಮಾಹಿತಿ ನೀಡಿದ್ದು, ನಾನು ದಿ.27.12.2013 ರಂದು ಟ್ರು ಸೀಸನ್ ಕಂಪನಿಯ ಮಾಲೀಕರಾದ ಆರೋಪಿಯನ್ನು ಭೇಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೂರು ವರ್ಷಗಳ ಅವಧಿಗೆ ಸದಸ್ಯತ್ವವನ್ನು ಪಡೆದುಕೊಂಡು ಮೂರು ರಾತ್ರಿ ಮತ್ತು ನಾಲ್ಕು ಅವಧಿಗೆ ಹಾಲಿಡೆ ಪ್ಯಾಕೇಜ್ ಗೆ ಒಟ್ಟು ರೂ.21,500/- ಗಳನ್ನು ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2015ನೇ ಸಾಲಿನ ಮೇ ತಿಂಗಳಲ್ಲಿ ಸದರಿ ಕಂಪನಿಯನ್ನು ಮುಚ್ಚಿರುತ್ತಾರೆ ಎಂದರೆ ಸರಿಯಲ್ಲ. ನನ್ನಿಂದ ಹಣ ಪಡೆದು ಹಾಲಿಡೆ ಪ್ಯಾಕೇಜ್ ಸೌಲಭ್ಯವನ್ನು ನೀಡದೇ ನನಗೆ ಆರೋಪಿ ಮೋಸ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನ್ನಂತಯೆ ಇತರರು ಸಹ ಹಣವನ್ನು ಪಾವತಿ ಮಾಡಿದ್ದು ಮತ್ತು ಅವರಿಗೂ ಸಹ ಪ್ಯಾಕೇಜ್ ಸೌಲಭ್ಯವನ್ನು ನೀಡದೇ ಆರೋಪಿ ಮೋಸ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-1ರವರು ವಿವೇಕನಾಂದ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ.ಜಿಕೆ ಆರೋಪಿ ಪರ ವಕೀಲರು ಪಾಟೀಸವಾಲು ಏನು ಇಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**

**ಬೆಂಗಳೂರು.**